

ಚಿತ್ರ: ಎಚ್.ಜಿ.ಪ್ರಶಾಂತ್

**ಸಾಮಾನ್ಯವಾಗಿ ಆನೆಗಳು 12ರಿಂದ 15ರ ವಯಸ್ಸಿನಲ್ಲಿ ಪ್ರಾಯಕ್ಕೆ ಬರುತ್ತವೆ. ಪ್ರಾಯದ ಹೆಣ್ಣಾನೆ ಬೆದೆಗೆ ಬಂದಾಗ ಸಲಗವನ್ನು ಸೆಳೆಯಲು ಫೆರಮೋನ್ ಎಂಬ ರಾಸಾಯನಿಕವನ್ನು ಮೂತ್ರದ ಮೂಲಕ ವಿಸರ್ಜಿಸುತ್ತದೆ. ಅಲ್ಲದೆ, ಆಗಾಗ ತಲೆ ಮೇಲೆತ್ತಿ ಘೀಳಿಡುತ್ತದೆ. ಸಲಗದ ಸಾಂಗತ್ಯಕ್ಕಾಗಿ ಹೆಣ್ಣು ಹಂಬಲಿಸುವ ಸಂಕೇತವದು.**

ಒಟ್ಟಾಗಿ ಬಾಳುವುದು, ವಂಶದ ಪರಂಪರೆಯನ್ನು ಕಾಯ್ದುಕೊಳ್ಳುವುದು ಈ ಸಂಕುಲದ ವೈಶಿಷ್ಟ್ಯ. ಪ್ರತಿ ವಂಶಕ್ಕೆ ಇರುವುದು ಸುಮಾರು 600 ಚದರ ಕಿ.ಮೀ.ಯಷ್ಟು ವಿಶಾಲವಾದ ಆವಾಸಸ್ಥಾನ. ಅದೇ ಆ ವಂಶದ 'ಗೃಹ ವಲಯ'.

ಪ್ರತಿದಿನ ಆನೆಗೆ ಸುಮಾರು 200 ಕೆ.ಜಿ.ಯಷ್ಟು ಆಹಾರ ಬೇಕು. ಆಹಾರಕ್ಕಾಗಿ ನಿತ್ಯ ಹತ್ತಾರು ಕಿ.ಮೀ.ಯಷ್ಟು ದೂರದವರೆಗೆ ಅವುಗಳ ಗುಂಪು ಅಲೆದಾಡುತ್ತದೆ. ಮರಿಗಳ ಲಾಲನೆ, ಪಾಲನೆ ಮಾಡುವುದು ಗುಂಪಿನಲ್ಲಿರುವ ಚಿಕ್ಕಮ್ಮ ಆನೆಯ ಕೆಲಸ. ನೀರು–ಆಹಾರ ಎಲ್ಲಿ ಸಿಗುತ್ತದೆ, ಅಪಾಯದ ಸನ್ನಿವೇಶದಲ್ಲಿ ಏನು ಮಾಡಬೇಕು, ದಾರಿ ತಪ್ಪಿದಾಗ ತಂಡವನ್ನು ಪುನಃ ಕೂಡಿಕೊಳ್ಳುವುದು ಹೇಗೆ– ತಂಡದ ಹಿರಿಯರಿಂದ ಇಂತಹ ಪಾಠಗಳು ಮರಿಯಾನೆಗಳಿಗೆ ನಿತ್ಯವೂ ನಡೆಯುತ್ತವೆ.

ಗಂಡಾನೆ ಮರಿಗಳು ಪುಂಡತನಕ್ಕೆ ಹೆಸರುವಾಸಿ. ಗುಂಪಿನಲ್ಲಿದ್ದಾಗ ಅವುಗಳು ಮಾತೃಪ್ರಧಾನ ವ್ಯವಸ್ಥೆಯ ಕಟ್ಟುಪಾಡುಗಳನ್ನು ಪಾಲಿಸುವುದಿಲ್ಲ. 9ರಿಂದ 14 ವರ್ಷಗಳಷ್ಟು ವಯಸ್ಸಾಗುವ ವೇಳೆಗೆ ಅವುಗಳು ಗುಂಪಿನಿಂದ ಹೊರಬಿದ್ದು, ಸ್ವತಂತ್ರವಾಗಿ ಬದುಕಲು ಆರಂಭಿಸುತ್ತವೆ. ಈ ಒಂಟಿಸಲಗಗಳು 1,400 ಚದರ ಕಿ.ಮೀ.ಯಷ್ಟು ವಿಸ್ತಾರವಾದ ಗೃಹ ವಲಯವನ್ನು ಹೊಂದಿರುತ್ತವೆ.

ಸಾಮಾನ್ಯವಾಗಿ ಆನೆಗಳು 12ರಿಂದ 15ರ ವಯಸ್ಸಿನಲ್ಲಿ ಪ್ರಾಯಕ್ಕೆ ಬರುತ್ತವೆ. ಪ್ರಾಯದ ಹೆಣ್ಣಾನೆ ಬೆದೆಗೆ ಬಂದಾಗ ಫೆರಮೋನ್ ಎಂಬ ರಾಸಾಯನಿಕವನ್ನು (ಸ್ವಜಾತಿಯ, ಆದರೆ ವಿರುದ್ಧ ಲಿಂಗದ ಪ್ರಾಣಿಯನ್ನು ಸೆಳೆಯಲು ಸ್ರವಿಸುವ ದ್ರವ) ಮೂತ್ರದ ಮೂಲಕ ವಿಸರ್ಜಿಸುತ್ತದೆ. ಅಲ್ಲದೆ, ಆಗಾಗ ತಲೆ ಮೇಲೆತ್ತಿ ಘೀಳಿಡುತ್ತದೆ. ಸಲಗದ ಸಾಂಗತ್ಯಕ್ಕಾಗಿ ಆ ಹೆಣ್ಣು ಹಂಬಲಿಸುತ್ತಿರುವ ಸಂಕೇತವದು. ಬೆದೆಯ ಅವಧಿ ಸಾಮಾನ್ಯವಾಗಿ ಮೂರು ವಾರಗಳವರೆಗೆ ಇರುತ್ತದೆ.

ಇನ್ನೊಂದೆಡೆ ಮಸ್ತಿಗೆ ಬಂದ ಗಂಡಾನೆ ಸಹ ತನಗೆ ಯೋಗ್ಯವೆನಿಸುವ ಸಂಗಾತಿಗಾಗಿ